ಮಾಡಬೇಕಾದರೆ ರೂಲ್ಸ್‌ನಲ್ಲಿ ನಿಯಮವಿದೆ, ಅದರ ಪ್ರಕಾರ ಪ್ರಸ್ತಾಪ ಮಾಡಬಹುದು. ಪದೇ ಪದೇ ತಾವು ತೀರ್ಮಾನ ಮಾಡಿದರೂ ಕೂಡ ಅದೇ ವಿಚಾರವನ್ನೇ ಮತ್ತೆ ಮತ್ತೆ ಹೇಳುವುದು ನಿಯಮ ಗಳಿಗೆ ವಿರೋಧವಾಗುತ್ತದೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—I uphold the point of order and I request the hon. Member Sri Vatal Nagaraj to resume his seat. If he wants to give notice, let him give it. I cannot give an assurance to that effect. I shall consider the notice on its merits. Now short notice question may be put.

SHORT NOTICE QUESTION AND ANSWER

Failure of street lights in Jewargi town

80. Sri SADASHIVAPPA PATIL (Deodurg).—

Will the Minister for Development be pleased to state :—

(*a*) whether in Jewargi town, District Gulbarga, street lights have failed since the last one month;

(*b*) whether Government is aware that on account of failure of street lights people of the town are experiencing great difficulty ;

(*c*) the action taken by Government in the matter ?

Sri B. L. GOWDA (Deputy Minister for Co-operation).—

(*a*) Yes.

(*b*) This has been brought to the notice of Government very recently.

(*c*) Efforts will be made to start the street lights as early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಇತ್ತೀಚೆಗೆ ಇದನ್ನು ಯಾರೂ ಸರಕಾರದ ಗಮನಕ್ಕೆ ತರಲಿಲ್ಲವೇ ? ಯಾರು ಗಮನಕ್ಕೆ ತಂದರು ? ದೀಪ ನಂದಿಹೋಗುವುದಕ್ಕೆ ಯಾರು ಕಾರಣರು ? ನಂದಿಹೋಗಿ ಎಷ್ಟು ದಿವಸವಾಗಿದೆ ?

†ಶ್ರೀ ಬಿ. ಎಲ್. ಗೌಡ.—ಇದನ್ನು ಗಮನಕ್ಕೆ ತಂದಿರುವವರು ಚೀಫ್ ಎಗ್ಸಿಕ್ಯುಟೀವ್ ಆಫೀಸರು, ತಾಲ್ಲೂಕು ಬೋರ್ಡ್, ಜೇವರ್ಗಿ. ಹಾಗೆ ಮಾಡಿ ಸುಮಾರು ಒಂದೂವರೆ ತಿಂಗಳಾಗಿದೆ.

ಶ್ರೀ ಸದಾಶಿವಪ್ಪ ಪಾಟೀರ್.—ಯಾವ ಕಾರಣದಿಂದ ದೀಪ ನಿಂತಿವೆ ?

ಶ್ರೀ ಬಿ. ಎಲ್. ಗೌಡ.—ಪಂಚಾಯಿತಿಯವರು ವಿದ್ಯುಚ್ಛಕ್ತಿ ಬೋರ್ಡಿಗೆ ಬಾಕಿ ಕೊಟ್ಟಿಲ್ಲದಿರು ವುದರಿಂದ ದೀಪ ನಿಂತಿದೆ. ಪಂಚಾಯಿತಿಯವರು ಕಟ್ಟುವಂತೆ ಚೀಫ್ ಎಗ್ಸಿಕ್ಯುಟಿವ್ ಆಫೀಸರು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀರ್.—ಜೇವರ್ಗಿ ಪಟ್ಟಣದಲ್ಲಿ ದೀಪ ನಿಂತು ಒಂದೂವರೆ ತಿಂಗಳಾಗಿ ದ್ದರೂ ಬೋರ್ಡಿನವರು ಮಿನಿಮಂ ಫೀಜು 2 ರೂಪಾಯಿ ಹಾಕುತ್ತಿದ್ದಾರೆ. ಪಂಚಾಯಿತಿ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಜುನಾವಣೆಯಾದ ಮೇಲೆ ಮಿಾಟಿಂಗ್ ಕೂಡ ಆಗಿಲ್ಲ ವೆಂಬುದು ಗೊತ್ತಿದೆಯೇ ?

ಶ್ರೀ ಬಿ. ಎಲ್. ಗೌಡ.—ವಿದ್ಯುಚ್ಛಕ್ತಿ ಬೋರ್ಡ್ ಮಿನಿಮಂ ಛಾರ್ಜ್ ಮಾಡುವ ವಿಷಯ ಗೊತ್ತಿಲ್ಲ. ಪಂಚಾಯಿತಿ ಮಿಾಟಿಂಗಿನ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.